ಸಭಾಧ್ಯಕ್ಷರು ತಮ್ಮ ಪೀಠದಿಂದ ಕೊಟ್ಟ Rulings ಅನ್ನು quote ಮಾಡಿ, ತಮ್ಮ ಗಮನಕ್ಕೆ ತಂದಿದ್ದೇನೆ. ಅದನ್ನು ಗಮನಕ್ಕೆ ತೆಗೆದುಕೊಂಡು You pass a ruling. ಮತ್ತೆ ಅದನ್ನು ನಾವು question ಮಾಡುತ್ತಾ, ಇದರ ಬಗ್ಗೆಯೇ ಜಿಜ್ಞಾಸೆ ಮಾಡುವುದು ಒಳ್ಳೆಯದಲ್ಲ.

ಶ್ರೀ ಸಿದ್ದರಾಮಯ್ಯ : Question ಕೇಳುವುದು, ಅರಿಕೆ ಮಾಡುವುದು Limited purpose ಗೋಸ್ಕರ ಹೇಳಿದ್ದಾರೆ. Leader of the opposition and the members in general, ಮುಖ್ಯಮಂತ್ರಿಯವರು, ನೀವು Right to Information ಅಡಿಯಲ್ಲಿ ನೋಟೀಸ್ ಕೊಟ್ಟು ಉತ್ತರ ಪಡೆದುಕೊಳ್ಳ ಬೇಕೆಂದು ಹೇಳುವುದಾದರೆ, ಇಲ್ಲಿ Leader of the Opposition ಏಕೆ ಇರಬೇಕು? Why?

ಶ್ರೀ ಸಿ.ಟಿ. ರವಿ : "ಬೆಟ್ಟ ಅಗೆದು ಇಲ್ಲಿ ಹಿಡಿಯುವ ಕೆಲಸವೇಕೆ ಬೇಕು?"

ಶ್ರೀ ಸಿದ್ದರಾಮಯ್ಯ : I cannot understand. ನನ್ನನ್ನು Leader of the Opposition ಎಂದು ನೀವೇಕೆ recognize ಮಾಡಬೇಕು? Like all other members, all other citizens ನೀವು ತೆಗೆದುಕೊಳ್ಳಿ ಎಂದರೆ, Why there is a special staus for the Leader of the opposition under the rules?

ಅಧ್ಯಕ್ಷರು : ಈ ವಿಷಯವನ್ನು ಈಗ Close ಮಾಡೋಣ.

ಡಾ: ಹೆಚ್.ಸಿ. ಮಹಾದೇವಪ್ಪ : RTI ಕೆಳಗಡೆ, any member or citizen of the country can get the information. ಆ ತರಹ ಇದ್ದಮೇಲೆ ನಮ್ಮನ್ನೇಕೆ ಕರೆಯಬೇಕು? ಈ Houseನ್ನು ಏಕೆ ಕರೆಯಬೇಕು? Rules ಏಕೆ ಬೇಕು?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅವರಿಗೆ ಏಕೆ ಭಯ ಇದೆ ಎನ್ನುವುದು ಗೊತ್ತಿಲ್ಲ. **(ಗೊಂದಲ)** ಅವರಿಗೆ ನಿಮ್ಮ ಬಗ್ಗೆಯೂ ನಂಬಿಕೆ ಇಲ್ಲ, Rules Committee ಗೆ ಕೊಡಿ ಎಂದರೆ ಅದಕ್ಕೂ ನಂಬಿಕೆ ಇಲ್ಲ, ಮತ್ತೊಂದು Committee ಗೆ ಕೊಡಿ ಎಂದರೆ ಅದಕ್ಕೂ ನಂಬಿಕೆ ಇಲ್ಲ. ಸರ್ಕಾರದವರು